**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ ನ್ಯಾಯಾಲಯ.**

**ರಟ್ಟೀಹಳ್ಳಿ.**

**ಸಿ.ಸಿ.ನಂಬರ್ಃ 117/2018**

ಸಿಡಬ್ಲ್ಯೂಃ 24

ಪಿಡಬ್ಲ್ಯೂಃ 15

| | | |
|---|---|---|
| ಸಾಕ್ಷಿಯ ಹೆಸರು | : | ಸಂಗನಾಥ ಜೆ.ಆರ್. |
| ತಂದೆಯ ಹೆಸರು | : | ರಾಜಪ್ಪ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಪಿ.ಐ. ಸಿ.ಐ.ಡಿ. ಬೆಂಗಳೂರು. |
| ವಾಸಸ್ಥಳ | : | ಬೆಂಗಳೂರು |

ಇಂದು ದಿನಾಂಕಃ 30.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ನಾನು ದಿಃ 12-06-2017 ರಿಂದ 04-10-2018 ರವರಗೆ ಹಿರೇಕೆರೂರ ವೃತ್ತ ಕಛೇರಿಯಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

1. ದಿನಾಂಕಃ 12.06.2017 ರಂದು ಪ್ರಕಣದ ಕಡತವನ್ನು ಚಾಸಾ-23 ರವರಿಂದ ಪಡೆದು ಪರಿಶೀಲಿಸಿರುತ್ತೇನೆ.

2. ದಿನಾಂಕಃ 22.06.2017 ರಂದು ಆರೋಪಿ 1 ರವರ ಡಿ.ಎಲ್. ಎಕ್ಸಟ್ರಾಕ್ಟ್ ಆರ್.ಟಿ.ಓ. ಶಿವಮೊಗ್ಗರವರಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

3. ದಿನಾಂಕಃ 15.07.2017 ರಂದು ಚಾಸಾ-12 ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

4. ದಿನಾಂಕಃ 30.10.2017 ರಂದು ಚಾಸಾ-6 ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕಕ್ಕೆ ಅಳವಡಿಸಿಕೊಂಡಿರುತ್ತೇನೆ.

5. ದಿನಾಂಕಃ 25.11.2017 ರಂದು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

5. ಸಾಕ್ಷಿಯು 1 ನೇ ಆರೋಪಿಯ ಡಿ.ಎಲ್. ಎಕ್ಸಟ್ರ್ಯಾಕ್ಟ್ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಡಿ.ಎಲ್. ಎಕ್ಸಟ್ರ್ಯಾಕ್ಟ್‌ನ್ನು ನಿಪಿ-65 ಎಂದು ಸಾಕ್ಷಿಯ ಸಹಿಯನ್ನು ನಿಪಿ-65(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ-6 ಮತ್ತು 12 ರವರ ಗಾಯದ ಪ್ರಮಾಣ ಪತ್ರಗಳಾದ 38 ಮತ್ತು 44 ರ ಮೇಲಿರುವ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-38(ಎ) ಮತ್ತು 44(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ</u>** 1 ನೇ ಆರೋಪಿ ಪರ ಶ್ರೀ. ವಿ.ವಿ.ಎಮ್. ವಕೀಲರಿಂದಃ

1. ನನ್ನ ತನಿಖಾವಾಧಿಯಲ್ಲಿ ಆರೋಪಿ 1 ರವರ ತಪ್ಪಿನಿಂದ ಅಪಘಾತ ಆಗಿಲ್ಲ ಎಂದು ಕಂಡು ಬಂದಿದ್ದರೂ ಸಹ ಮೃತರಿಗೆ ಹಾಗೂ ಗಾಯಾಳುಗಳಿಗೆ ಸಹಾಯ ಮಾಡಲು ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** 2 ನೇ ಆರೋಪಿ ಪರ ಶ್ರೀ. ಜಿ.ಎಸ್.ಎಮ್. ವಕೀಲರಿಂದಃ

1. ನಾನು ಕಡಕತವನ್ನು ಸ್ವೀಕರಿಸಿಕೊಂಡ ನಂತರ ದೂರನ್ನು ಪರಿಶೀಲಿಸಿರಿತ್ತೇನೆ. ದೂರಿನಲ್ಲಿ 2 ನೆ ಆರೋಪಿಯಾಗಲೀ ಅಥವಾ ದ್ವಿಚಕ್ರವಾಹನವಾಗಲೀ ಒಳಗೊಂಡಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ನಾನು ನಿಪಿ-10 ಮತ್ತು 11 ರ ಫೋಟೋಗಳನ್ನು ಪರಿಶೀಲಿಸಿರುತ್ತೇನೆ. ಸದರಿ ಫೋಟೋಗಳು ಆಟೋ ಪಲ್ಟಿಯಾದ ಕಾಲಕ್ಕೆ ತೆಗೆದಿದ್ದು ಎಂದರೆ ಸರಿ. ಸದರಿ ಫೋಟೋಗಳಲ್ಲಿ ದ್ವಿಚಕ್ರ ವಾಹನ ಕಾಣಿಸುವುದಿಲ್ಲ ಎಂದರೆ ಸರಿ. ನಾನು ಚಾಸಾ-1, 6 ಮತ್ತು 7 ರವರನ್ನು ಮರುವಿಚಾರಣೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮೊದಲೇ ಮರು ಹೇಳಿಕೆ ನೀಡಿದ್ದರು.

2. ಅಪಘಾತದಲ್ಲಿ 2 ನೇ ಆರೋಪಿ ಹಾಗೂ ದ್ವಿಚಕ್ರ ವಾಹನ ಒಳಗೊಂಡಿರುವ ಬಗ್ಗೆ ಯಾವುದೇ ಲಿಖಿತ ಸಾಕ್ಷ್ಯ ಇಲ್ಲ ಎಂದರೆ ಸರಿ. ನನ್ನ ತನಿಖಾವಾಧಿಯಲ್ಲಿ 2 ನೇ ಆರೋಪಿಯಾಗಲೀ ಅಥವಾ ದ್ವಿಚಕ್ರವಾಗಲೀ ಒಳಗೊಂಡಿಲ್ಲ ಎಂದು ಕಂಡು ಬಂದಿದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಕ್ಕೂ ಹಾಗೂ 2 ನೇ ಆರೋಪಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ.